ತಾರೀಖು 9ನೆ ಜುಲೈ 1907.

ನಂ. ರೆ. 292—ಲ್ಯಾ. ರೆ. 3-07—3, ಸ್ಯ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಮತ್ತು 4 ಎಕರೆ 6 ಗುಂಟೆಗಳ ವಿಸ್ತೀರ್ಣವುಳ್ಳ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ಹಾಸನ ತಾಲ್ಲೂಕಿನಲ್ಲಿ 86ನೆ ರಿಜಿಸ್ಟರ್ ನಂಬರ್ ಹೊಳಲುಕೆರೆ ಮತ್ತು ಅಂಗಳವನ್ನು ವಿಸ್ತರಿಸುವದಕ್ಕೆ ಅವಶ್ಯಕವಾಗಿವೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಹಾಸನ ಡಿಪ್ಯಾಕ್ಟು ಖಜಾನೆಯ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸರ್ವೆ ನಂಬರ್.	ಖುಷ್ಕಿ ತರಿ ಯಾ ಬಾಗಾಯಿತು.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ.			
								ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಹಾಸನ	ಹಾಸನ	ಗ್ರಾಮ	ಹೊಳಲು	ಹಲಗ ಬಿ. ಈರಣ್ಣ.	1	ಖುಷ್ಕಿ	ಎ. ಗು. 0 37	ಕೆರೆ ...	ಸರ್ವೆ ನಂ. 2, ಗ್ರಾಮುನಿವೇಶನ ತಳವಾರ ವಿನಾಮು.	ತಳವಾರ ಇನಾಮು ಜಮೀನು.	ಕೆರೆ ಅಂಗಳ
				ಡಿಟೋ...	2	ಡಿಟೋ	1 9	ಸರ್ವೆ ನಂ. 1 ಮತ್ತು ತಳವಾರ ಇನಾಮು ಜಮೀನು.	ಸರ್ವೆ ನಂ. 2ರ ಭಾಗ.	ಡಿಟೋ	ಸರ್ವೆ ನಂ. 1 ಮತ್ತು ಗ್ರಾಮುನಿವೇಶನ.
				ತಳವಾರ ಸರ್ವಿಸ್ ಇನಾಮು	3	ಡಿಟೋ	1 12	ಕೆರೆ ಅಂಗಳ	ಸರ್ವೆ ನಂ. 3 ಮತ್ತು 2ರ ಭಾಗಗಳು	ಸರ್ವೆ ನಂ. 4ರ ಭಾಗ	ಸರ್ವೆ ನಂ. 1 ಮತ್ತು 2
				ಹಲಗ ಬಿ. ಈರಣ್ಣ.	4	ಡಿಟೋ	0 28	ಡಿಟೋ	ತಳವಾರ ಇನಾಮು ಜಮೀನು.	ಡಿಟೋ	ತಳವಾರ ಇನಾಮು ಜಮೀನು.

ತಾರೀಖು 10ನೆ ಜುಲೈ 1907.

ನಂ. ರೆ. 327—ಲ್ಯಾ. ರೆ. 17-07—3, 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ : ಇದರಡಿ ವಿವರಿಸಿರುವ ಮತ್ತು ಎರಡು ಎಕರೆ ವಿಸ್ತೀರ್ಣವುಳ್ಳ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಬಂದು ಡಿಸ್ಪೆನ್ಸರಿ ಕಟ್ಟುವುದಕ್ಕೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಶಿವಮೊಗ್ಗ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ	ಗ್ರಾಮ	ಖಾತೆದಾರರ ಹೆಸರು	ಸರ್ವೆ ನಂಬರು	ಖುಷ್ಕಿ, ತರಿ ಯಾ ಬಾಗಾಯಿತು.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ			
								ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
ಶಿವಮೊಗ್ಗ	ಕುಂಸಿ ಸಬ್ ತಾಲ್ಲೂಕು	ಕುಂಸಿ	ಗೋಪಿಶೆಟ್ಟಿಪುರ	ವೀರಪ್ಪ ಬಿ. ನಂಜಪ್ಪನ	6	ಖುಷ್ಕಿ	ಎ. ಗು. 2 0	ಸರ್ವೆ ನಂಬರ್ 6ರ ಪೈಕಿ ಉಳಿದ ಭಾಗ.	ಹಳೇ ಡಿಸ್ಪೆನ್ಸರಿಯ ರಸ್ತೆ.	ಸರ್ವೆ ನಂಬರ್ 7	ಸರ್ವೆ ನಂಬರ್ 5